ದಿನಾಂಕಃ 29.10.2024

ಅಸಲು ದಾವೆಃ219/2022

ಪಿ.ಡಬ್ಲ್ಯೂ: 1

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಹೆಚ್.ಎನ್.ಎಸ್. ರವರಿಂದಃ**

ನಾನು ಬಿ.ಎ. ಓದಿರುತ್ತೇನೆ. ನಾನು ಬೆಂಗಳೂರಿನ ಖಾಸಗಿ ಪ್ರಿಂಟಿಂಗ್ ಪ್ರೆಸ್ ನಲ್ಲಿ ಕೆಲಸ ಮಾಡುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳು ಸತ್ಯವಾಗಿರುತ್ತವೆ. ನಿಮ್ಮ ಪ್ರಮಾಣ ಪತ್ರದಲ್ಲಿ ವಿವರಿಸಿರುವ ರೀತಿ ಹೊಂಬಾಳೆ ಮಂಚಯ್ಯರವರ ವಂಶವೃಕ್ಷವನ್ನು ತಹಶೀಲ್ದಾರ್ ಕಚೇರಿಯಿಂದ ಪಡೆದು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂ.98/3 ಹಾಗೂ 98/4 ಆಸ್ತಿಗಳನ್ನು ಹೊರತುಪಡಿಸಿ ಉಳಿದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವುದಾಗಿ ಹೇಳಿದ್ದೀರಿ, ಆ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ದಿನಾಂಕ 03.01.2013 ರ ಅಧಿಸೂಚನೆಯಂತೆ ಹೆಬ್ಬೆರಳು ಗ್ರಾಮದ ಸರ್ವೆ ನಂ.200RS/1 (ಹಳೆ ನಂ.98/3 ) ರಲ್ಲಿ 1 ಗುಂಟೆ ಹಾಗೂ ಸರ್ವೆ ನಂ.200RS/3 (ಹಳೆ ನಂ.98/4) ರಲ್ಲಿ 2 ಗುಂಟೆ ಜಮೀನು ಮುತ್ತುರಾಯನ ಕೆರೆ ಪೋಷಕ ನಾಲಾ ನಿರ್ಮಾಣಕ್ಕಾಗಿ ಭೂಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದು ಹೇಳಿದ್ದೀರಿ ಆ ಬಗ್ಗೆ ನಿಮ್ಮ ತಿಳುವಳಿಕೆಗೆ ಇತ್ತು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಭೂ ಸ್ವಾಧೀನವಾದ ಈ ಎರಡು ಜಮೀನುಗಳಲ್ಲಿ ಒಟ್ಟು ಕುಟುಂಬದವರಾಗಿ ಜಂಟಿ ಸ್ವಾಧೀನದಲ್ಲಿ ಇದ್ದೇವೆ ಎಂದು ನೀವೇನಾದರೂ ಭೂ ಸ್ವಾಧೀನ ಅಧಿಕಾರಿಗೆ ಅರ್ಜಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ಸಾಕ್ಷಿ ಪುನಃ ಹೇಳುತ್ತಾರೆ ಅರ್ಜಿ ಕೊಟ್ಟಿಲ್ಲ ಸಂಬಂಧಪಟ್ಟ ದಾಖಲಾತಿಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಸದರಿ ಜಮೀನುಗಳು ಭೂಸ್ವಾಧೀನವಾದ ಬಗ್ಗೆ ಜಿಲ್ಲಾಧಿಕಾರಿಯವರಿಂದ ನಿಪಿ.15 ರಂತೆ ಗೆಜೆಟ್ ನೋಟೀಫಿಕೇಷನ್ ಆಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಗೆಜೆಟ್ ನೋಟೀಫಿಕೇಷನ್ ಪ್ರಕಾರ ಯಾರಾದರೂ ತಕರಾರು ಸಲ್ಲಿಸುವುದು ಇದ್ದರೆ ತಕರಾರು ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿರುತ್ತಾರೆ ನೀವೇನಾದರೂ ತಕರಾರು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನಾವೇನು ತಕರಾರು ಕೊಟ್ಟಿರಲಿಲ್ಲ ಎಂದು ಉತ್ತರಿಸುತ್ತಾರೆ.

ನಿಪಿ.16 ಮತ್ತು 17 ರಂತೆ 1 ನೇ ಪ್ರತಿವಾದಿಗೆ ಬಂದಿರುವ ನೋಟೀಸಿಗೆ ಸಂಬಂಧಪಟ್ಟಂತೆ ನೀವೇನಾದರೂ ಮಂಡ್ಯ ವಿಶೇಷ ಭೂಸ್ವಾಧೀನ ಅಧಿಕಾರಿಗೆ ತಕರಾರು ಅರ್ಜಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.  ನಿಪಿ.18 ರಂತೆ 1 ನೇ ಪ್ರತಿವಾದಿ ನೀಡಿರುವ ಮಾಹಿತಿ ತಪ್ಪು ನಮಗೂ ಆ ಸ್ವತ್ತಿನಲ್ಲಿ ಹಕ್ಕಿದೆ ಎಂದು ನೀವೇನಾದರೂ ಮಂಡ್ಯ ವಿಶೇಷ ಭೂಸ್ವಾಧೀನ ಅಧಿಕಾರಿಗೆ ತಕರಾರು ಅರ್ಜಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಾತನ ಹೆಸರು ಹೆ್ಂಬಾಳಯ್ಯ, ನಿಮ್ಮ ತಂದೆಯ ಹೆಸರು ಹೊಂಬಾಳಯ್ಯ, ಪ್ರತಿವಾದಿಯ ಕುಟುಂಬದವರ ಹೆಸರು ಹೊಂಬಾಳಯ್ಯ ಎಂದು ಹೆಸರಿದ್ದು ನಿಪಿ.1 ಆರ್.ಟಿ.ಸಿ. ಯಲ್ಲಿ ಹೊಂಬಾಳಯ್ಯ ಎಂದು ನಮೂದಾಗಿರುವುದರ ದುರುಪಯೋಗಪಡಿಸಿಕೊಂಡು ಪ್ರತಿವಾದಿ ನಮಗೆ ಗೊತ್ತಿಲ್ಲದಂತೆ ಪರಿಹಾರ ಪಡೆದುಕೊಂಡಿದ್ದಾರೆಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಈ ದಾವಾ ದಾಖಲಿಸುವ ಮುಂಚೆ ಪ್ರತಿವಾದಿಗಳಿಗೆ ವಕೀಲರ ಮೂಲಕ ನೋಟೀಸ್ ಕಳುಹಿಸಿರುತ್ತೇನೆ ಎಂದರೆ ಸರಿ. ಸದರಿ ನೋಟೀಸಿಗೆ 1 ನೇ ಪ್ರತಿವಾದಿ ಉತ್ತರ ಕೊಡಿಸಿದ್ದಾರೆ ಎಂದರೆ ಸರಿ. ಸದರಿಯವರು ಕೊಟ್ಟಿರುವ ಉತ್ತರವನುನ ಓದಿ ತಿಳಿದುಕೊಂಡಿರುತ್ತೇನೆ.  ಸದರಿ ನೋಟೀಸಿನಲ್ಲಿ 1 ನೇ ಪ್ರತಿವಾದಿ ಮಂಚಮ್ಮನವರಿಗೆ ವಯಸ್ಸಾಗಿರುವುದರ ದುರುಪಯೋಗಪಡಿಸಿಕೊಂಡು ಪಿಂಚಣಿ ಕೊಡಿಸುವುದಾಗಿ ಹೇಳಿ ಕರೆದುಕೊಂಡು ಹೋಗಿ ರೂ.9,19,827/- ಮೊತ್ತವನ್ನು ನೀವು ತೆಗೆದುಕೊಂಡು ಅವರಿಗೆ ವಂಚನೆ ಮಾಡಿದ್ದಾರೆ ಎಂದು ಹೇಳಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

LAC 167/2018 ಮಂಡ್ಯದ 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಅಧಿಕ ಪರಿಹಾರ ಕೋರಿ 1 ನೇ ಪ್ರತಿವಾದಿ ಸಲ್ಲಿಸಿದ್ದ ಪ್ರಕರಣದಲ್ಲಿ ನೀವೇನಾದರೂ ನನ್ನನ್ನು ಪಕ್ಷಗಾರರನ್ನಾಗಿ ಸೇರಿಸಿ ಎಂದು ಅರ್ಜಿ ಹಾಕಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ LAC ಪ್ರಕರಣದ ಆದೇಶದ ಜಾರಿಗಾಗಿ ಸಲ್ಲಿಸಿದ್ದ ಅಮಲ್ ಜಾರಿ ಪ್ರಕರಣ 196/2021 ರಲ್ಲಿ ನೀವೇನಾದರುಾ ಪಕ್ಷಗಾರರನ್ನಾಗಿ  ಸೇರಿಸಿ ಎಂದು ಅರ್ಜಿ ಹಾಕಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಕುಟುಂಬಕ್ಕೂ 1 ನೇ ಪ್ರತಿವಾದಿ ಮಂಚಮ್ಮನವರ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಸುಳ್ಳು ನಮ್ಮದು ಒಟ್ಟು ಕುಟುಂಬ ಎಂದು ಉತ್ತರಿಸುತ್ತಾರೆ.  ನಿಮಗೂ ಮತ್ತು ಅವರ ಕುಟುಂಬಕ್ಕೂ ಸಂಬಂಧ ಇಲ್ಲದೆ ಇರುವ ಕಾರಣ ನೀವು ತಹಶೀಲ್ದಾರ್ ಕಚೇರಿಯಿಂದ ದೃಢೀಕೃತ ವಂಶವೃಕ್ಷವನ್ನು ತಂದು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಊರಿನಲ್ಲಿ

ಹಿರಿಯರನ್ನು ಸೇರಿಸಿ ಮಾತುಕತೆ ನಡೆಯಿತು ಎಂದು ಸುಳ್ಳು ಹೇಳುತ್ತಿದ್ದೀರಿ, ಆ ರೀತಿ ಯಾವುದೇ ಮಾತುಕತೆ ನಡೆದಿಲ್ಲ ಎಂದರೆ ಸಾಕ್ಷಿ ಸತ್ಯ ಅವರ ಊರಿನಲ್ಲಿಯೇ ಮಾತುಕತೆ ನಡೆಯಿತು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಬದುಕಿರುವ ಕಾಲಕ್ಕೆ ಈ ಎರಡೂ ಆಸ್ತಿಗಳನ್ನು ಬಿಟ್ಟು ವಿಭಾಗ ಆಗಿತ್ತು ಎಂದು ಹೇಳಿದ್ದೀರಿ, ಆ ರೀತಿ ವಿಭಾಗ ಆಗಿದ್ದಲ್ಲಿ ನೀವು ಆ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಿದ್ದೀರಿ ಎಂದರೆ ಸಾಕ್ಷಿ ವಿಭಾಗ ಆಗಿದೆ ಎಂದು ಉತ್ತರಿಸುತ್ತಾರೆ. ಭೂಸ್ವಾಧೀನವಾದ ಸ್ವತ್ತುಗಳಲ್ಲಿ ನಿಮಗೆ ಹಕ್ಕು ಇದ್ದಲ್ಲಿ ನೀವು ವಿಶೇಷ ಭೂ ಸ್ವಾಧೀನ ಅಧಿಕಾರಿಯವರಿಗೆ ತಕರಾರು ಅರ್ಜಿ ಕೊಡುತ್ತಿದ್ದೀರಿ, ಆದರೆ ನಿಮಗೆ ಆ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇಲ್ಲದೆ ಇರುವ ಕಾರಣ ಆ ರೀತಿಯ ಯಾವುದೇ ಅರ್ಜಿಯನ್ನು ನೀವು ಕೊಟ್ಟಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನಿಮಗೆ ಆ ಸ್ವತ್ತುಗಳಲ್ಲಿ ಹಕ್ಕು ಇದ್ದಲ್ಲಿ ಮಂಡ್ಯದ ನ್ಯಾಯಾಲಯಗಳಲ್ಲಿ ನಡೆದ ಪ್ರಕರಣಗಳಲ್ಲಿ ನೀವು ಪಕ್ಷಗಾರರಾಗಿ ಸೇರಿ ಕೇಸ್ ನಡೆಸುತ್ತಿದ್ದೀರಿ ಆದರೆ ಹಕ್ಕು ಇಲ್ಲದೆ ಇರುವ ಕಾರಣ ನೀವು ಆ ಪ್ರಕರಣಗಳಲ್ಲಿ ಪಕ್ಷಗಾರರಾಗಿ ಸೇರಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

**ವಿನಂತಿಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.